## ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ಪ್ರಶ್ನೆ: ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹುಳಿಮಾವು ಠಾಣಾ ವ್ಯಾಪ್ತಿಯಲ್ಲಿ ಸರ್ವೇ ನಂ.27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ. ಸ್ವತ್ತುಗಳಿಗೆ ಅನಧಿಕೃತವಾಗಿ ರೌಡಿಗಳು ದಬ್ಬಾಳಿಕೆಯಿಂದ ಬೇಲಿ ಹಾಕುತ್ತಿದ್ದಾರೆ. ನಿವೇಶನ ಪಡೆದಿರುವ ಫಲಾನುಭವಿಗಳು ಈ ಸಂಬಂಧ ಆರಕ್ಷಕ ಠಾಣೆಗೆ ದೂರು ನೀಡಲು ಹೋದರೆ ಅರ್ಜಿದಾರರನ್ನು ಪೊಲೀಸರು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಹೆದರಿಸುತ್ತಾ, ದಬ್ಬಾಳಿಕೆ, ದೌರ್ಜನ್ಯವೆಸಗುತ್ತಿರುವ ರೌಡಿಗಳ ಪರವಾಗಿಯೇ ಪೊಲೀಸರು ನಿಲ್ಲುತ್ತಿದ್ದು, ದೂರಿನ ಸಂಬಂಧ ಎಫ್.ಐ.ಆರ್. ಮಾಡದೇ ಎನ್.ಸಿ.ಆರ್. ಮಾಡುತ್ತಾ, ಅಕ್ರಮ ಮಾಡುವವರಿಗೆ ಪರೋಕ್ಷವಾಗಿ ಪೊಲೀಸರೇ ಸಹಾಯ ಮಾಡುತ್ತಿರುವುದರಿಂದ ನಿವೇಶನದಾರರಿಗೆ ಸೂಕ್ತ ರಕ್ಷಣೆ ಇಲ್ಲದೇ, ತುಂಬಾ ಅನ್ಯಾಯ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು.**

ಉತ್ತರ: ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿ.ಡಿ.ಎ ಸ್ವತ್ತುಗಳಿಗೆ ಸಂಬಂಧಿಸಿದಂತೆ ದೇವರಚಿಕ್ಕನಹಳ್ಳಿಯ ವಾರ್ಡ್ ನಂ-188 ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿಎ ನಿವೇಶನ 12/1 ಹಂಚಿಕೆಯಾಗಿರುತ್ತದೆ. ಸದರಿ ಸಿಎ ಸೈಟಿನ ಸಂಬಂಧ ಹುಳಿಮಾವು ಪೊಲೀಸ್ ಠಾಣೆಯಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ.

ದಿನಾಂಕ: 21.02.2020 ರಂದು ಶ್ರೀ ಸತೀಶ್ ಅಭಿಯಂತರರು, ಬಿ.ಡಿ.ಎ ರವರು ಜಯರಾಮ್ ಮತ್ತು ಸುನಿಲ್‌ಕುಮಾರ್ ಇವರುಗಳು ಬಿಡಿಎ ಸ್ವಾದೀನಪಡಿಸಿಕೊಂಡು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರಿಗೆ ಹಂಚಿಕೆ ಮಾಡಿದ್ದ ಸಿಎ ಸೈಟ್ ನಂ-12/1ಕ್ಕೆ ಅತಿಕ್ರಮ ಪ್ರವೇಶ ಮಾಡಿ ತಮಗೆ ಸೇರಿದ್ದೆಂದು ಬೋರ್ಡ್ ಅನ್ನು ನೆಟ್ಟಿದ್ದ ಬಗ್ಗೆ ದೂರು ನೀಡಿದ್ದು, ಈ ಬಗ್ಗೆ ಹುಳಿಮಾವು ಪೊಲೀಸ್ ಠಾಣೆ ಮೊ.ಸಂ:39/2020 ಕಲಂ.447, 427 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:13712/2020 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ದಿನಾಂಕ: 31.10.2020 ರಂದು 20.35 ಗಂಟೆಗೆ ಶ್ರೀ ಪ್ರಶಾಂತ್ ಬಿನ್ ಪ್ರತಾಪ್, 33 ವರ್ಷ ಅಸಿಸ್ಟಂಟ್ ಮಾನೇಜರ್, ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್, ನಂ-29, ಪಿ ಕಾಳಿಂಗರಾವ್ ರೋಡ್, ಆಂಜುಮಾನ್ ಕೆ.ಆರ್. ಟವರ್ಸ್ ಮಿಷನ್ ರೋಡ್, ರಿಚ್ಮಂಡ್ ಸರ್ಕಲ್, ಬೆಂಗಳೂರು ಇವರು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ಬಿಡಿಎ ರವರು ಅವರಿಗೆ ಹಂಚಿಕೆ ಮಾಡಿದ್ದ ಸಿ.ಎ ಸೈಟ್ ನಂ.12/1 ರಲ್ಲಿನ ಜಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಮ್ಮ ಕಂಟ್ರಾಕ್ಟರ್ ಮೆ॥ ಮಹಾ ಕನ್‌ಸ್ಟ್ರಕ್ಷನ್ ರವರು ದಿನಾಂಕ:30.10.2020 ರಂದು ಸುಮಾರು 12.00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತರು ದೊಡ್ಡ ಯಂತ್ರಗಳೊಂದಿಗೆ ಸ್ವತ್ತಿನಲ್ಲಿ ನಿರ್ಮಿಸಿದ್ದ ಶೀಟಿನ ಪೆನ್ಸಿಂಗ್ ಅನ್ನು ಕೆಡವಿ ಹಾಕಿ ಸುಮಾರು 20 ಲಕ್ಷ ರೂ.ನಷ್ಟು ನಷ್ಟಪಡಿಸಿರುತ್ತಾರೆ. ಈ ವಿಷಯದ ಬಗ್ಗೆ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರನ್ನು ಪಡೆದು ಹುಳಿಮಾವು ಪೊಲೀಸ್ ಠಾಣೆಯ ಮೊ.ಸಂ.203/2020 ಕಲಂ.427, 447 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು ಆರೋಪಿಯನ್ನು ದಸ್ತಗಿರಿಪಡಿಸಿ ಆರೋಪಿ ವಿರುದ್ಧ ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:17053/2021 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಈ ಸ್ವತ್ತಿನ ವಿಚಾರವಾಗಿ ಈಗಾಗಲೇ ಐಓಸಿಎಲ್ ರವರಿಗೆ ಸೈಟ್ ಅನ್ನು ಮಂಜೂರು ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ [ಪಿಟಿಷನ್ ಪಾರ್ ಸ್ಪೆಷಲ್ ಲೀವ್] ನಂ:6496/2021 ದಾವೆಯಲ್ಲಿ ಸಲ್ಲಿಸಿದ್ದು, ಆ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:01.07.2021 ರಂದು " Status quo as of today shall be maintained by the parties with regard to the suit property" ಎಂದು ಆದೇಶ ನೀಡಿರುತ್ತದೆ. ಸದರಿ ಸ್ಥಳದಲ್ಲಿ ಪಾರ್ಟಿದಾರರು ಯಥಾ ಸ್ಥಿತಿ ಕಾಪಾಡಿಕೊಂಡು ಹೋಗುತ್ತಿರುತ್ತಾರೆ. ಸದರಿ ಪ್ರಕರಣದ ಮುಂದಿನ ವಿಚಾರಣಾ ದಿನಾಂಕ 06.12.2023 ಆಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ಅಂತಿಮ ಆದೇಶದನ್ವಯ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹುಳಿಮಾವು ಪೊಲೀಸ್ ಠಾಣಾ ಸರಹದ್ದಿನ ಸರ್ವೆ ನಂ. 27/2, 29/2, 30, 33, 35/2 ಹಾಗೂ ಇತರೆ ಬಿ.ಡಿ.ಎ ಸ್ವತ್ತುಗಳ ವಿಚಾರವಾಗಿ ಸಾರ್ವಜನಿಕರಿಂದ ಯಾವುದೇ ದೂರುಗಳು/ ಪ್ರಕರಣಗಳು ವರದಿಯಾಗಿರುವುದಿಲ್ಲ. ಹುಳಿಮಾವು ಪೊಲೀಸ್ ಠಾಣೆಯಲ್ಲಿ ಯಾವುದೇ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ದೂರು ನೀಡಲು ಬಂದಂತಹ ಸಾರ್ವಜನಿಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹೆದರಿಸಿ, ದಬ್ಬಾಳಿಕೆ, ದೌರ್ಜನ್ಯವನ್ನು ಎಸಗಿರುವುದಿಲ್ಲ ಹಾಗೂ ರೌಡಿಗಳ ಪರವಾಗಿ ನಿಂತಿರುವುದಿಲ್ಲ. ಠಾಣೆಯಲ್ಲಿ ಅಕ್ರಮ ಮಾಡುವವರಿಗೆ ಪರೋಕ್ಷವಾಗಿ ಸಹಾಯ ಮಾಡಿರುವುದಿಲ್ಲ. ಅಕ್ರಮ ಮಾಡುತ್ತಿರುವವರ ವಿರುದ್ಧ ದೂರುಗಳು ಬಂದಲ್ಲಿ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ. ದೂರುಗಳು ಸಿವಿಲ್ ಸ್ವರೂಪದ್ದಾಗಿದ್ದರೆ ಎನ್.ಸಿ.ಆರ್ ದಾಖಲಿಸಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ವಿವಾದವನ್ನು ಬಗೆಹರಿಸಿಕೊಳ್ಳುವಂತೆ ಹಿಂಬರಹ ನೀಡಲಾಗುತ್ತದೆ ಹಾಗೂ ಸಾರ್ವಜನಿಕರಿಂದ ದೂರನ್ನು ಸ್ವೀಕರಿಸಿದ ಕೂಡಲೇ ಸಂಜ್ಞೇಯ ಅಪರಾಧವಾಗಿದ್ದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತದೆ.

---

ಹೆಚ್‌ಡಿ 505 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು